OS No.113/14

ಇಂದು ದಿನಾಂಕಃ23-6-2015 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃಶ್ರೀ. ಎಂ ಸಿ ಬಿ ವಕೀಲರಿಂದ

ನಮ್ಮ ಮಾವ ಸತ್ಯಪ್ಪನ ಸ್ವಂತ ಊರು ತೇರದಾಳ ಇರುತ್ತದೆ. ಅಲ್ಲಿ ನಮ್ಮ ಮಾವನವರಿಗೆ 4 ಎಕರೆ 11 ಗುಂಟೆ ಜಮೀನಿದೆ. ಮುಗಳಖೋಡದಲ್ಲಿ 4 ಎಕರೆ ಜಮೀನಿದೆ. ಮದರಕಂಡಿಯಲ್ಲಿ ದಾವಾ ಆಸ್ತಿಯನ್ನು ಹೊರತುಪಡಿಸಿ 4 ಎಕರೆ ಜಮೀನು ಇದೆ. ಸತ್ಯಪ್ಪ ತೀರಿಕೊಂಡು 7-8 ವರ್ಷಗಳಾದವು. 20 ವರ್ಷಗಳ ಹಿಂದೆ ಸತ್ಯಪ್ಪನ ಆಸ್ತಿಯಲ್ಲಿ ಪಾಲು ಆದ ಬಗ್ಗೆ ನನಗೆ ಗೊತ್ತಿಲ್ಲಾ. ಸತ್ಯಪ್ಪನ ಆಸ್ತಿಯಲ್ಲಿ 20 ವರ್ಷಗಳ ಹಿಂದೆ ಪಾಲು ಮಾಡಿಕೊಂಡಿದ್ದಾರೆಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ. 20 ವರ್ಷದ ಹಿಂದೆ ನಮ್ಮ ಮಾವ ಸತ್ಯಪ್ಪನು ಆಸ್ತಿಯನ್ನು ಪಾಲು ಮಾಡಿ ತನ್ನ ಇಬ್ಬರು ಮೊಮ್ಮಕ್ಕಳಿಗೆ ಆಸ್ತಿ ಮಾಡಿಕೊಟ್ಟಿರುತ್ತಾರೆ. ಆ ಸ್ತಿಯಲ್ಲಿ 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿಯು ಅದನ್ನು ನನಗೆ ಗೊತ್ತಿಲ್ಲದೆ ಹಾಗೇ ಮಾರಾಟ ಮಾಡಿರುತ್ತಾರೆಂದು ನುಡಿದಿರುತ್ತಾರೆ. 20 ವರ್ಷದ ಹಿಂದೆ ಸತ್ಯಪ್ಪನ ಆಸ್ತಿಯಲ್ಲಿ ಪಾಲು ಆದಾಗ ಪರಪ್ಪ ಮತ್ತು ನಾಗಪ್ಪ ಇವರಿಗೆ ಪಾಲು ಬಂದಿರುತ್ತದೆ. ಆ ಪ್ರಕಾರವಾಗಿ ಅವರುಗಳು ತಮ್ಮ ತಮ್ಮ ಪಾಲಿನ ಆಸ್ತಿಯನ್ನು ಉನ್ನುತ್ತಾ ಮಾಡುತ್ತಾ ಬಂದಿರುತ್ತಾರೆ. ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಜಮೀನಿನಲ್ಲಿ ನನಗೆ ಪಾಲು ಬೇಡಾ. ಮಂದರಕಂಡಿಯಲ್ಲಿರುವ ಸರ್ವೇ ನಂಃ145 ವಿಸ್ತೀರ್ಣ 4 ಎಕರೆ ಜಮೀನನ್ನು ಮೈದುನರು ನೋಡಿಕೊಳ್ಳುತ್ತಿದ್ದು ಅದನ್ನು ನಾನು ನೋಡಿಕೊಳ್ಳುವುದಿಲ್ಲ. ಆಸ್ತಿಯಲ್ಲಿ ಪಾಲು ಮಾಡುವಾಗ ಸತ್ಯಪ್ಪ ತರೇದಾಳದ ಆಸ್ತಿಯನ್ನು ನನ್ನ ಗಂಡನಿಗೆ ಮಾಡಿಕೊಟ್ಟಿದ್ದರು ಎಂದರೆ ಸರಿ ಅಲ್ಲ. ಮುಗಳಖೋಡದಲ್ಲಿ ಜಮೀನನ್ನು ಸಹ ನನ್ನ ಗಂಡನಿಗೆ ಕೊಟ್ಟಿದ್ದರು ಎಂದರೆ ಸರಿ ಅಲ್ಲ. ನಮ್ಮ ಅತ್ತೆ ಸತ್ಯವ್ವ ಜೀವಂತ ಇರುತ್ತಾರೆ. ಆಕೆಗೆ ಯಾವ ಪಾಲು ನೀಡಿರುವುದಿಲ್ಲ. ಸತ್ಯಪ್ಪನು ಮೊಮ್ಮಕ್ಕಳು ತಮ್ಮ ಪಾಲಿಗೆ ಬಂದ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ಸದರಿಯವರ ಕಬ್ಜಾದಲ್ಲಿದ್ದಾರೆಂದರೆ ಸರಿ ಅಲ್ಲ. ಆದರೆ ನಾನೇ ಕಬ್ಜೆಯಲ್ಲಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ನಾನುದಾವಾ ಆಸ್ತಿಯ ಕಬ್ಜೆಯಲ್ಲಿರುವುದಿಲ್ಲವೆಂದರೆ ಸರಿ ಅಲ್ಲ. ಎರಡುವರ್ಷದ ಹಿಂದೆ 1 ನೇ ಪ್ರತಿವಾದಿ ಒಪ್ಪಿ ಗೆ ಪತ್ರವನ್ನು ಬರೆದುಕೊಟ್ಟು ದಾವಾ ಆಸ್ತಿಯಲ್ಲಿ 25 ಗುಂಟೆ ಜಾಗವನ್ನು ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ದಾವೆಯ ಸಲುವಾಗಿ ಒಪ್ಪಿಗೆ ಪತ್ರವನ್ನು ಹುಟ್ಟಿಸಿದ್ದೇನೆಂದರೆ ಸರಿ ಅಲ್ಲ. ದಾವಾ ಆಸ್ತಿಯು 4 ನೇ ಪ್ರತಿವಾದಿಯ ಹೆಸರಿನಲ್ಲಿ ಉತಾರ ಇರುತ್ತದೆಂದರೆ ಸರಿ ನಂತರ ನಾನುದಾವೆ ಹಾಕಿರುತ್ತೇನೆಂದರೆ ಸರಿ ಅಲ್ಲ. ದಾವಾ ಆಸ್ತಿಯಲ್ಲಿ ನನ್ನ ಯಾವ ಹಕ್ಕಿರುವುದಿಲ್ಲವೆಂದದರೆ ಸರಿ ಅಲ್ಲ ನಾನು ಖೊಟ್ಟಿ ದಾವೆ ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

4 ನೇ ಪ್ರತಿವಾದಿ ಪರ ಶ್ರೀ ಎಸ್ ಕೆ ಎಚ್ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಃ ನೀಡಲಾಯಿತು.

ಸಾಕ್ಷಿಯ ಸಹಿ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಹಾಗೂ ಜೆ ಎಂ ಎಫ್ ಸಿ ಜಮಖಂಡಿ.

ಸಾಕ್ಷಿಯ ಸಹಿ